doc-550
T.P-4

Regd No B G 182 ಗೋಮಾತಾಕೀ ಜೈ Monthly Jai Go Mata September 1972 ಸೆಪ್ಟಂಬರ್

ಗೋರಕ್ಷಣಕ್ಕೆ ಲೇಖನ ಕೊಡುತ್ತಿರುವವರಿಗೆ, ನೆರವು (ಡೊನೇರ್) ನೀಡುತ್ತಿರುವವರಿಗೆ, ಪ್ರಚಾರಮಾಡುತ್ತಿರುವವರಿಗೆ ವಂದನೆಗಳು

ಅನೇಕ ಪ್ರತಿಗಳು ಉಚಿತವಾಗಿ ಹಂಚಲಾಗುತ್ತಿದೆ

ವಾರ್ಷಿಕ ಚಂದಾ ಅಂಚೆ ಮೂಲ್ಕ 80ನ್ಯೆಸೆ

ವಿನಂತಿ– ಸಕಲರೀತಿಯಲ್ಲೂ ನೆರವುನೀಡಿ

ಗೋರಕ್ಷಣ
GORAKSHANA

Office– 1067 Chamarajapuram, Mysore 4

Please help in every way

This Humanitarin

– Propaganda Paper –

Many Papers Distributed Free

ಗೋರಕ್ಷಣ, ಅಹಿಂಸಾ ಪ್ರಚಾರ ಪತ್ರಿಕೆ

ದೇಶಾದ್ಯಂತ ಗೋವಧೆ ಕೂಡಲೆ ನಿಲ್ಲಲಿ

ವರ್ಷ 23 rd Year ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ ಬಿಡಿ ಪ್ರತಿ ೞ ಪೈಸೆ

Cow Slaughter should be banned Immediately

ಆಚಾರ್ಯರ ಆಶೀರ್ವಾದ — ಮಹಾತ್ಮಾಜೀಯವರ ಮನದಾಶೆ

ಆಚಾರ್ಯ ಸ್ವಾಮಿಜೀಯವರ ಆಶೀರ್ವಾದ ಹಾಗೂ ಮಹಾತ್ಮಾಜೀಯವರ ಮನದಾಶೆ, ಇವೆರಡೂ ಭಾರತೀಯ ಜನತೆಯ ಮನದಲ್ಲಿವೆ. ಈಗಿರುವ ಆ ಚಾರ್ಯ ಸ್ವಾಮಿಗಳೆಲ್ಲರೂ ಗೋಹತ್ಯೆ ಕೊನೆಗೊಳ್ಳಬೇಕೆನ್ನುವ ಅಭಿಪ್ರಾಯ ಹೊಂದಿದವರೇ ಇದ್ದಾರೆ. ಶ್ರೀ ಕೃಷ್ಣಜನ್ಮಾಷ್ಟಮಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ತಮಿಳ್ನಾಡಿಗೆ ಹೋಗಿದ್ದ ಕರ್ನಾಟಕದ ರಾಜ್ಯಪಾಲ ಶ್ರೀ ಮೋಹನಲಾಲ ಸುಖಾಡಿಯಾರವರು ಕಂಚಿ ಕಾಮಕೋಟಿ ಪೀಠಾಧೀಶ ಶ್ರೀ ಶ್ರೀ ಶಂಕರಾಚಾರ್ಯರ ದರ್ಶನ ಪಡೆದಾಗ, ಸ್ವಾಮಿಜೀಯವರು ರಾಜ್ಯಪಾಲರ ಬಳಿ ಗೋಹತ್ಯೆನಿಷೇಧಕ್ಕಾಗಿ ಪ್ರಯತ್ನಿಸಬೇಕೆಂದು ತಿಳಿಯಪಡಿಸಬೇಕೆಂದು ತಿಳಿಯಪಡಿಸಿ ಆಶೀರ್ವಾದ ಕೊಟ್ಟಿರುವರು. ರಾಜಸ್ಥಾನದಲ್ಲಿ, ಪೈಸೂರಿನಲ್ಲಿ ಪಶುವಧೆ ನಡೆಯುತ್ತಿಲ್ಲವೆಂದು ತಪ್ಪಿಸಿಕೊಳ್ಳುವ ಬದಲು, ದಿಲ್ಲೀ ಬಾದಷಾಹಗಳಿಗೆ ಕೋಪಬಂದರೂ ಸರಿ ಸುಖಾಡಿಯಾರವರು ಸುಖ್ಕೆ ತಿಲಾಂಜಲಿ ಇತ್ತು ಸ್ವಾಮಿಜೀಯವರ ಆಶೀರ್ವಾದ ಬಲದಿಂದ ಗೋಹತ್ಯೆ ತಡೆಯಲು ಪ್ರಯತ್ನಿಸುವರೇ? ಶ್ರೀ ಕೃಷ್ಣಜನ್ಮಾಷ್ಟಮಿಯ ಸಮಯವೇ ಆಚಾರ್ಯರು ಆಶೀರ್ವಾದವಿತ್ತಿರುವುದು ಸರಿಯಾದ ಸಮಯವೇ ಸರಿ. ಶ್ರೀ ಕೃಷ್ಣನಿಗೆ ಪ್ರಿಯವಾದುದನ್ನೇ ಆಚಾರ್ಯ ಸ್ವಾಮಿಜೀಯವರು ತಿಳಿಸಿದ್ದಾರೆ. ಮೋಹಕ್ಕೊಳಗಾಗದೆ ಶ್ರೀ ಮೋಹನಲಾಲರು ಕಾರ್ಯರಂಗದಲ್ಲಿ ಕಾಲಿಡುವ ಧೈರ್ಯ ತೋರಿಸುವರೇ?

ಮಹಾತ್ಮಾ ಗಾಂಧಿಯವರ ಹುಟ್ಟುಹಬ್ಬವನ್ನಾಚರಿಸುವ ಸಮಯವೂ ಇದೇ. ಸ್ವರಾಜ್ಯಕ್ಕಿಂತಲೂ ತನಗೆ ಪ್ರಿಯವಾಗಿರುವುದು ಗೋಹತ್ಯೆ-ನಿಷೇಧ ಎಂದಿರುವರು ಮಹಾತ್ಮಾಜೀ. ಸ್ವಾತಂತ್ರ್ಯ ರಜತಮಹೋತ್ಸವವನ್ನಾಚರಿಸುತ್ತ, ಮಹಾತ್ಮಾಜೀಯವರ ಹುಟ್ಟುಹಬ್ಬವನ್ನಾಚರಿಸುತ್ತಿರುವಾಗ ಗೋವಧೆಯೂ ಬಳಕೆಯಲ್ಲಿರುವುದು ಸ್ವತಂತ್ರದೇಶಕ್ಕೆ, ಅದರ ಗೌರವಕ್ಕೆ. ಅಲ್ಲಿರುವ ಜನತೆಗೆ ಭೂಷಣಪ್ರಾಯವೇನು?

ವಿಘ್ನೇಶ್ವರನು ಎಲ್ಲ ವಿಘ್ನಗಳನ್ನು ಪರಿಹರಿಸಿ, ಗೋಹತ್ಯೆ ನಿಷೇಧ ಕಾನೂನು ತರುವಂತೆ ಅಧಿಕಾರದ ಆಸನದಲ್ಲಿರುವವರಿಗೆ ಸದ್ಬುದ್ಧಿಯನ್ನಿಯಲಾರನೇ? ಆಗ ಮಹಾತ್ಮಾಜೀಯವರ ಮನದಾಶೆಯೂ ಕೈಗೂಡುತ್ತದೆ, ಆಚಾರ್ಯಶ್ರೀಗಳವರ ಆಶೀರ್ವಾದವೂ ಫಲಿಸುತ್ತದೆ. — ಶಿವಶಂಕರ

ಗೋ ಭಕ್ತಿ

"ಗವಿಭಕ್ತಿರ್ವಿಧ್ಯತು" ಗೋವಿನಲ್ಲಿ ಭಕ್ತಿಯಿರಲಿ; ಈ ಮಾತಿನ ಅರ್ಥವನ್ನು ತಿಳಿದು ಪುರಾಣ ವೇದಕಾಲಗಳಲ್ಲಿನ ಜನರು ಅದರಂತೆ ನಡೆಯುತ್ತಿದ್ದರು; ಗೋಮಾತೆಯ ದಯೆಗೆ ಪಾತ್ರರಾಗುತ್ತಿದ್ದರು. ದೇಶದಲ್ಲಿ ಒಬ್ಬನೂ ರಾಜಾಜ್ಞೆ ವಿಾರದೆ ಗೋ ಸೇವೆಯಲ್ಲಿ ನಿರತರಾಗುತ್ತಿದ್ದರು.

ಆದರೆ, ಈಗ ಎಲ್ಲಿ ನೋಡಿದರೂ ಗೋಮಾತೆಯ ನಿಂದೆ ಕೇಳುತ್ತಿದೆ. ಏಳಿ, ಭಾರತೀಯ ಜನರೇ! ಗೋಮಾತೆಯನ್ನು ರಕ್ಷಿಸೋಣ; ಗೋರಕ್ಷಣಕ್ಕೆ ನೆರವು ನೀಡೋಣ. ಗೋನ ಮೂಕ ಶಾಪಕ್ಕೊಳಗಾಗಿ ಬಡ ಭಾರತವಾಗುತ್ತಿದೆ. ಪಾಶ್ಚಾತ್ಯ ಸಂಸ್ಕೃತಿಯು ಭಾರತೀಯರನ್ನು ವಶರುಳುಗೊಳಿಸುತ್ತಿದೆ. ಭಾರತೀಯ ಸಹೋದರರೇ! ನಿಮ್ಮ ಸಂಸ್ಕೃತಿಯನ್ನು ರಕ್ಷಿಸಿರಿ; ಗೋವನ್ನು ಕಾಪಾಡಿರಿ.

— ಎಂ ವಿಘ್ನೇಶ್ವರಶರ್ಮಾ, ಪ್ವರ್ನವಲ್ಲೀಮಠ

ಸಿಂಹ ರಕ್ಷಣೆಗೆ ಕರ್ಜನ್ನರ ಯತ್ನ

– ಭಾರತದ ಮಾಜಿ ವೈಸರಾಯಿ ಲಾರ್ಡ್ ಕರ್ಜನ್ ಒಳ್ಳೆ ಕ್ರೀಡಾಪಟು, ಶಿಕಾರಿಯಲ್ಲಿ ಆಸಕ್ತರಾಗಿದ್ದರು. ದೇಶದಲ್ಲಿ ಗಿರ್ ಸಿಂಹ ಕಡಮೆಯಾಗುತ್ತಿರುವದನ್ನರಿತು ಆ ಸಿಂಹಗಳನ್ನು ಬೇಟೆಯಾಡುತ್ತಿರಲಿಲ್ಲವಲ್ಲದೆ, ಜುನಘಡ ನವಾಬರಿಗೆ ಸಿಂಹಗಳ ರಕ್ಷಣೆಗೆ ಸೂಚನೆ ಇತ್ತಿದ್ದರು.

★

ಹುಲಿಗಳ ರಕ್ಷಣೆ

ನವದೆಹಲಿ— ಇಂದು ಭಾರತದಲ್ಲಿ 1827 ಹುಲಿಗಳು ಮಾತ್ರ ಇದ್ದು, ಹುಲಿಗಳ ರಕ್ಷಣೆಯ ರೂ. 58 ಕೋಟಿ ಯೋಜನೆಯನ್ನು ಪ್ರಧಾನಿಯವರಿಗೆ ಅರ್ಪಿಸಲಾಗಿದೆ.

★

ಪಾದ್ರಿಯ ಮೃತ್ಯು ನಡವಳಿಕೆ

ಇಟಲಿಯ ಅಸಿಸಿ ನಗರದಲ್ಲಿ ಶತಮಾನಗಳ ಹಿಂದೆ ವಾಸಿಸುತ್ತಿದ್ದ ಸೆಂಟ್ ಫ್ರಾನ್ಸಿಸ್ ಪಾದ್ರಿಯು ಪಕ್ಷಿಗಳನ್ನೂ, ಪ್ರಾಣಿಗಳನ್ನೂ, ಗಿಡಗಳನ್ನೂ, ಪ್ರೀತಿಸುತ್ತಿದ್ದನಲ್ಲದೆ, ಕಲ್ಲುಗಳಂಥ ನಿರ್ಜೀವಿಗಳನ್ನೂ ಪ್ರೀತಿಸುತ್ತಿದ್ದನು.

ಭಗವಂತನ ಕೃಪೆಯಿಂದ 'ಗೋರಕ್ಷಣ' ಕ್ಕೆ 23 ನೇ ವರ್ಷ ಪ್ರಾರಂಭವಾಯಿತು.

★

ಕ್ಷೀರೋತ್ಸವ

ಕೇಲ್ (ಡಾಡ್)— ಈ ವರ್ಷ ಅಂತರರಾಷ್ಟ್ರೀಯ ಕ್ಷೀರೋತ್ಸವ ಸಮ್ಮಾರಂಭವನ್ನು 19 ರಾಷ್ಟ್ರಗಳಲ್ಲಿ ನಡೆಸಲಾಯಿತು. ಮುಖ್ಯವಾಗಿ ಕ್ಷೀರದ್ರವ ಆಹಾರವು ಎಷ್ಟರಮಟ್ಟಿಗೆ ಪೋಷಕಾಂಶಗಳನ್ನು ಒದಗಿಸುವುದರಿಂದ ಅಬಾಲವೃದ್ಧರು ಆರೋಗ್ಯ ರಕ್ಷಣೆ ಮಾಡಿಕೊಳ್ಳಲು ಸಾಧ್ಯ ಎಂಬ ಅಂಶವನ್ನು ವಿಶದೀಕರಿಸಲಾಯಿತು. ಈ ಸಂದರ್ಭದಲ್ಲಿ ಕ್ಷೀರ ದಿನದಂದು ಹುಟ್ಟಿದ ಮಕ್ಕಳಿಗೆ ಒಂದೂವರೆ ಲೀಟರ್ ಹಾಲನ್ನು ಉಚಿತವಾಗಿ ಆರು ತಿಂಗಳವರೆಗೆ ಒದಗಿಸುವ ಕಾರ್ಯವನ್ನು ಉತ್ತರ ಜರ್ಮನಿಯ ಕ್ಷೀರ ಕ್ಷೇತ್ರಗಳು ಒಪ್ಪಿಕೊಂಡವು.

★

ಪ್ಲಾಸ್ಟಿಕ್ ಕೊಕ್ಕು

ಬ್ರೆಮೆ (ಡಾಡ್)— ಫೆಡರಾಲ್ ಜರ್ಮನಿಯ ಬ್ರೇಮರ್‌ಹೇವ್ನ ಮೃಗಶಾಲೆಯಲ್ಲಿನ ಇಂಡಿಯನ್ ರೈನಾಸಿರಸ್ ಹಕ್ಕಿ ತನ್ನ ಮೇಲಿನ ಕೊಕ್ಕನ್ನು ಕಳೆದುಕೊಂಡಿತು – ಕೃತಕ ಕೊಕ್ಕನ್ನು ತಯಾರಿಸಿ ಅಂಟಿಸಲಾಯಿತು – ನಂತರ ಧಾನ್ಯವನ್ನು ತಿಂದು ವೈಕ್ಷಕರನ್ನು ಆಕರ್ಷಿಸಿತು.

●

ಪ್ರಾಣಿಧಾಮದಲ್ಲಿ ಅಗಾಧ-ನಷ್ಟ

ಭರತಪುರದಲ್ಲಿ ಈಚಿನ ಪ್ರವಾಹಗಳಿಂದ ವನ್ಯಜೀವಿಗಳ ನಷ್ಟವೆಷ್ಟಾಗಿದೆಯೆಂದರೆ ಅವುಗಳನ್ನು ಮತ್ತೆ ಭರ್ತಿಮಾಡಿಕೊಳ್ಳಲು 10 ವರ್ಷಗಳು ಬೇಕೆಂದು ಆ ವಿಭಾಗದ ಅರಣ್ಯಾಧಿಕಾರಿಗಳ ಅಭಿಪ್ರಾಯವಾಗಿದೆ: ಅಲ್ಲಿಯ ಪ್ರಾಣಿಧಾಮದಲ್ಲಿ ಯಥೇಚ್ಛವಾಗಿ ವಿವಿಧ ಪ್ರಾಣಿಗಳಿದ್ದವು; ಆರ್ಜ ಏರಿ ಒಡೆದುಹೋದನಂತರ ಅಲ್ಲಿ ಒಂದು ದೊಡ್ಡ ಸರೋವರದಂತೆಯೇ ಆಗಿ 25 ಮಾಟರು ಆಳದಲ್ಲಿ ನೀರು ನಿಂತಿತ್ತು.

ಪ್ರಾಚೀನ ಭಾರತದಲ್ಲಿ ಗೋಸಂವರ್ಧನೆ

ಲೇಖಕರು : ಅನಂತಕೃಷ್ಣ ಜೋಯಿಸ್ — ಆಧಾರ : ಹಿಂದೀ ಗೋರಕ್ಷಣ

*

[ಮುಂದುವರಿದುದು]

ಗೋಶಾಲೆಯಲ್ಲಿ ಆಟವಾಡಿ ಗೋವುಗಳಿಗೆ ಕಷ್ಟವನ್ನು ಕೊಡಬಾರದು ; ಪಾದ ರಕ್ಷೆಗಳನ್ನು ಧರಿಸಿ ಗೋಶಾಲೆಯನ್ನು ಪ್ರವೇಶಿಸಬಾರದು ; ರೋಗಗ್ರಸ್ತ ಹಾಗೂ ದುರ್ಬಲವಾದ ಗೋವುಗಳ ಪಾಲನೆ ಪೋಷಣೆಗಳನ್ನು ತಮ್ಮ ಮಾತಾಪಿತೃಗಳಿಗೆ ಮಾಡುವಂತೆ ಮಾಡಬೇಕು ; ಅವುಗಳಿಗೆ ಹಿಂಸೆ ಕೊಡುವ ಯಾ ಕೊಲ್ಲುವ ವಿಚಾರವನ್ನು ಎಂದಿಗೂ ಕನಸುಮನಸ್ಸಿನಲ್ಲಿಯೂ ಮಾಡಬಾರದು ; ಗೋಶಾಲೆಯಲ್ಲಿ ರಾತ್ರಿಯವೇಳೆ ದೀಪವನ್ನು ಉರಿಸತಕ್ಕದ್ದು ; ಗೋಪಾಲನೆಯ ಸಂಬಂಧದಲ್ಲಿ ನವಡ ಪೂರ್ವಜರಿಗೆ ತಿಳಿದಿದ್ದ ವಿಷಯವು ಇಂದಿನ ಪಾಶ್ಚಾತ್ಯ ವೈಜ್ಞಾನಿಕ ಪ್ರಯೋಗಗಳಿಂ ಯಥಾರ್ಥವಾದುದೆಂದು ಸ್ಥಾಪಿಸಲ್ಪಟ್ಟಿದೆ.

ಗೋವಿನಿಂದ ಕ್ಷೀರವನ್ನು ಪಡೆಯುವ ಕಲೆಯಲ್ಲಿಯೂ ಸಹಾ ನಮ್ಮ ಶಾಸ್ತ್ರೀಯ ಗ್ರಂಥಗಳಲ್ಲಿ ವಿಶದವಾಗಿ ಪ್ರಕಾಶಿಸಲ್ಪಟ್ಟಿದೆ; ಹಾರೀತರ ಅನುಸಾರವಾಗಿ ಹಸುವಿನಿಂದ ಹಾಲನ್ನು ಚತುರತೆಯಿಂದಲೂ, ಸೂಕ್ಷ್ಮತೆಯಿಂದಲೂ ಪಡೆಯತಕ್ಕದ್ದು ; ಮೂರನೆಯ ತಿಂಗಳಲ್ಲಿ ಎರಡೇ ಸ್ತನದಿಂದಲೂ ನಾಲ್ಕನೆಯ ತಿಂಗಳಲ್ಲಿ ಮೂರು ಸ್ತನದಿಂದಲೂ ಹಾಲು ಕರೆಯತಕ್ಕದ್ದು.

ಗೋವುಗಳ ಸ್ವಸ್ಥತೆಗಾಗಿ ಪೂರ್ವಕರು ಅನೇಕ ಯಜ್ಞಗಳನ್ನು ನಡೆಸುತ್ತಿದ್ದರು ; ಗೃಹ ಸೂತ್ರದಲ್ಲಿಯೂ ಸಹ ಪಶುಗಳ ಸ್ವಾಸ್ಥ್ಯಕ್ಕೋಸ್ಕರ ಮಾಡುತ್ತಿದ್ದ ಧರ್ಮಕಾರ್ಯಗಳ ಉಲ್ಲೇಖವು ಕಾಣಿಸಿಗುತ್ತದೆ ; ಭೂಮಿಯು ಗೋಚರವಾದಂದಿನಿಂದ ಪ್ರಪ್ರಥಮವಾಗಿ ಅಂದಿನಿಂದಲೂ ಗೋಪೂಜೆಯು ವೇದಮಂತ್ರಾನುಸಾರವಾಗಿ ನಡೆಯುತ್ತಾ ಬಂದಿದೆ ; ಹಸುವಿಗೆ ಪ್ರಸವ ಉಂಟಾದ ಮೇಲೆ ವಿಲೀಯನ ಯಜ್ಞವನ್ನು ಮಾಡಿ, ಪ್ರಾರ್ಥಿಸುತ್ತಿದ್ದುದು ಏನೆಂದರೆ– ' ಹೇ ಪರಾಕ್ರಮಿಯಾದ ಇಂದ್ರನೇ ನಮ್ಮ ಈ ಗೋವುಗಳ ರಕ್ಷಣೆ ಮಾಡು ' ಎಂದು ಪ್ರಾರ್ಥಿಸಿ ನಂತರ ಮನೆಗೆ ಹಿಂತಿರುಗುತ್ತಿದ್ದರು ; ' ಪೂಜಿಸಲ್ಪಟ್ಟ ದೇವತೆಯು ನಮ್ಮ ಗೋವುಗಳನ್ನು ರಕ್ಷಿಸುತ್ತಾರೆ' ಎಂದು ನೆಮ್ಮದಿಯಿಂದ ಇರುತ್ತಿದ್ದರು.

ನಮ್ಮ ಪೂರ್ವಕರು ಗೋಪಾಲನಾಶಾಸ್ತ್ರದೊಡನೆ ಗೋಚಿಕಿತ್ಸಾ ವಿಧಾನದಲ್ಲಿಯೂ ಪ್ರವೀಣರಾಗಿದ್ದರು ; ಅಗ್ನಿ ಪುರಾಣದಲ್ಲಿ ಗೋವುಗಳಿಗೆ ಬರುವ ವಿವಿಧ ರೋಗಗಳ ಬಗ್ಗೆ ವ್ಯಾಖ್ಯೆ ಇವೆ ಪಾಂಡವರಲ್ಲಿ ಕಿರಿಯನಾದ ನಕುಲನು ಪಶು ಹೃದಯವನ್ನು ಬಲ್ಲವನಾಗಿದ್ದನಲ್ಲದೆ, ಪಶುಚಿಕಿತ್ಸಾ ವಿಧಾನದಲ್ಲಿಯೂ ವಿಶೇಷಜ್ಞನೆನಿಸಿಕೊಂಡಿದ್ದನು ಪುರಾಣ ಮತ್ತು ಆಯುರ್ವೇದದಲ್ಲಿ ಪಶುಚಿಕಿತ್ಸೆಯ ಬಗ್ಗೆ ವಿಚಾರಮಾಡಲಾಗಿದೆ ; ಪಶುಗಳ ಸಾಂಕ್ರಾಮಿಕ ರೋಗಗಳ ಬಗ್ಗೆ ಪ್ರಾಚೀನ ಕಾಲದಲ್ಲಿಯೇ ನಮ್ಮ ಪೂರ್ವಕರು ಅರಿತಿದ್ದರು. ಗಿರನಾರದಲ್ಲಿ ಪ್ರಾಪ್ತವಾದ ಅಶೋಕನ ಶಿಲಾ ಲೇಖವು ಈ ರೀತಿ ವ್ಯಕ್ತಪಡಿಸುತ್ತದೆ– ' ಇಡೀ ಸಾಮ್ರಾಜ್ಯದಲ್ಲಿ ಮತ್ತು ದರಾಜ್ಯದಲ್ಲಿಯೂ ಎರಡು ಪ್ರಕಾರದ ಚಿಕಿತ್ಸಾ ವಿಧಾನವನ್ನು ಜಾರಿಗೆ ತರಲಾಯಿತು– ಮನುಷ್ಯರಿಗಾಗಿ ಮತ್ತು ಪಶುಗಳಿಗಾಗಿ ".

ನಮ್ಮ ಪೂರ್ವಕರು ಗೋವುಗಳ ಆರೋಗ್ಯವನ್ನು ಕಾಪಾಡುವ ವಿಚಾರದಲ್ಲಿ ಬಹಳ ಜಾಗರೂಕರಾಗಿರುತ್ತಿದ್ದರು ; ಗೋದಾನದಂತೆಯೇ ವೃಷಭದಾನಕ್ಕೂ ಸಹ ಮಹತ್ವವಿರುತ್ತದೆ ; ಮತ್ಸ್ಯ ಪುರಾಣದಲ್ಲಿ ಒಂದು ಆದರ್ಶ ಗೋವು ಯಾ ವೃಷಭ ಕುರಿತು ಈ ರೀತಿ ಹೇಳಲಾಗಿದೆ–' ಗೋವು ಬಲಿಷ್ಠವಾಗಿರಬೇಕು, ಸೊಗಸಾದ ಶೃಂಗಗಳಿರಬೇಕು, ಸೊಗಸಾದ ಬಾಲವಿರಬೇಕು, ಕಣ್ಣುಗಳು ಹೊಳಪಾಗಿಯೂ ಸುಂದರವಾಗಿಯೂ ಇರಬೇಕು. ಬಾಯಲ್ಲಿ ಹದಿನೆಂಟು ಹಲ್ಲುಗಳಿರಬೇಕು. ಅದು ವೇಗತ್ಯಂತ ಬಲಶಾಲಿಯಾಗಿಯೂ ಪರಾಕ್ರಮದಿಂದಲೂ ಇರುತ್ತದಲ್ಲದೆ, ಸಿಂಹದಂತ ಘರ್ಜನೆಯನ್ನು ಮಾಡುತ್ತದೆ ಮತ್ತು ಅದರ ಗಮನವು ಮದಗಜ ಗಮನದಂತಿರುತ್ತದೆ". ಇಂದಿಗೂ ಸಹ ವೃಷಭಗಳನ್ನೂ ಯಾ ಗೋವುಗಳನ್ನೂ ಕೊಳ್ಳಬೇಕಾದರೆ ಸಂಲಕ್ಷಣವಾಗಿದೆಯೋ ಇಲ್ಲವೋ ಎಂದು ಪರೀಕ್ಷಿಸುತ್ತಾರೆ

ನೂರು ಹಸುಗಳಿಂದ ಕೂಡಿರುವಂಥವನನ್ನು " ಯೂಥಪತಿ " ಎಂತಲೂ, ಇಂದ್ರಿಯೋಪೇತ ಅಥವಾ ಗವೇಂದ್ರಪದನೆಂತಲೂ ಕರೆಯುತ್ತಾರೆ. ಸಹದೇವನು ಅಭಿಮಾನಪೂರ್ವಕವಾಗಿ ವಿರಾಟರಾಜನಿಗೆ ಹೇಳುತ್ತಾನೆ— " ಕೇವಲ ಗೋವಿನ ಮೂತ್ರವನ್ನು ಘ್ರಾಣಿಸುವ ಮಾತ್ರದಿಂದಲೇ ಅದು ಗರ್ಭವತಿಯಾಗಿದೆಯೋ ಇಲ್ಲವೋ ಎಂದು ಪತ್ತೆಹಚ್ಚುತ್ತೇನಲ್ಲದೆ, ಅಂತಹ ಗೋವಿನ ಲಕ್ಷಣವನ್ನು ಸಹ ಕಂಡುಹಿಡಿಯುತ್ತೇನೆ '. ಸಹದೇವನ ಈ ಕಥನದಿಂದ ಅವನಿಗಿದ್ದ ಪಶುಶಾಸ್ತ್ರ ಜ್ಞಾನವು ಅಪರಿಮಿತವಾದುದೆಂಬ ಅರಿವು ಮೂಡುತ್ತದೆ.

ನೂರು ಗೋವುಗಳ ಮಧ್ಯೆ ನಾಲ್ಕು ಬಲತರವಾದ, ಮದಗಜದಂತಿದ್ದ ಹೋರಿಗಳಿರುತ್ತಿದ್ದವು; ಅವುಗಳ ಪಾಲನೆ ಪೋಷಣೆಯು ಸಹ ಗೋವುಗಳಿಗೆ ಪಕಾಡು ತಿದ್ದಂತೆಯೇ ಮಾಡುತ್ತಿದ್ದರು ; ಮುಕ್ತವಾದ ಯಾ ಬಿಡಲ್ಪಟ್ಟ ಹೋರಿಯನ್ನು ಯಾರೂ ಹಿಡಿಯುತ್ತಿರಲಿಲ್ಲ, ಹಾಗೂ ಪಳಗಿಸುತ್ತಿರಲಿಲ್ಲ ; ಅದನ್ನು ಮಹಾಪಾಪವೆಂದು ಪರಿಗಣಿಸುತ್ತಿದ್ದರು. ಒಳ್ಳೆಯ ಮುದದಿಂದ ಕೂಡಿದ ಹೋರಿಗಳ ಗೋವಂಶ ವೃದ್ಧಿಯ ಮೂಲ್ಯ ಜನಕಲ್ಯಾಣಕ್ಕೋಸ್ಕರ ಹೋರಿಗಳನ್ನು ಸ್ವತಂತ್ರವಾಗಿ ಬಿಡುತ್ತಿದ್ದರು.

ಎತ್ತುಗಳ ವಿಷಯವಾಗಿ ಸ್ಕಂದ ಪುರಾಣದಲ್ಲಿ ಈ ರೀತಿ ಉಲ್ಲೇಖವಿದೆ—

ಉತ್ಪಾದ್ಯ ಸಸ್ಯಾನಿ ತೃಣಾಂ ಚರನ್ತಿ,
ತದೈಪಭೂಯಃ ಸಕಲಂ ವಹನ್ತಿ ।
ನಭಂರ ಖಿನ್ನಃ ಪ್ರವದಂತಿ ಕಿಂಚಿತ್,
ಅಹೋ ವೃಷೈರ್ ಜೀವತಿ ಜೀವಲೋಕಃ ॥

ಅರ್ಥಾತ್ ವೃಷಭವು ಅನ್ನವನ್ನು (ಭತ್ತ, ರಾಗಿ ಮುಂತಾದ ಧಾನ್ಯಗಳು) ಉತ್ಪಾದಿಸಿಯೂ ಕೂಡ ಸ್ವತಃ ತಾನೇ ಹುಲ್ಲನ್ನು ತಿನ್ನುತ್ತದೆ : ಯಾರಿಗೂ ತೊಂದರೆಯನ್ನು ಕೊಡುವುದಿಲ್ಲ ; ಅತಿ ಭಾರವನ್ನು ಹೊರುತ್ತಿದ್ದರೂ ಸಹ ಇನ್ನೊಬ್ಬರ ಸಹಾಯವನ್ನು ಪಡೆಯುವುದಿಲ್ಲಾ ; ವಾಸ್ತವವಾಗಿ ಸಂಸಾರವು ಅದರ ಕಾರಣದಿಂದ ಲೇಜೀವದಿಂದ ಕೂಡಿದೆ : ಅರ್ಥಾತ್ ಸಂಸಾರ ನಡೆಯುವುದೇ ಅದರಿಂದ

ಕೃಷಿ ಸಂಗ್ರಹಕ್ಕೋಸ್ಕರ ಎತ್ತುಗಳನ್ನು ಸರಿಯಾಗಿ ಉಪಯೋಗಿಸಿಕೊಂಡರೆ ಅವುಗಳಿಗೆ ಕಷ್ಟ ಉಂಟಾಗುವುದಿಲ್ಲ ಒಬ್ಬ ಕೃಷಿಕನ ಬಳಿ ಎಷ್ಟು ಎತ್ತುಗಳಿರಬೇಕೆಂಬುದೂ ಸಹ ಪುರಾಣಗಳಲ್ಲಿ ಉಕ್ತವಾಗಿದೆ ಯಾರ ಬಳಿ ಎಂಟು ಎತ್ತುಗಳಿರುವುದೋ ಅವನು ಧರ್ಮಿಯು, ಯಾರ ಬಳಿ ಆರು ಎತ್ತುಗಳಿರುವುದೋ ಅವನು ವೈವಸಾಯಿ, ಯಾರ ಬಳಿ ನಾಲ್ಕು ಎತ್ತುಗಳಿರುವುದೋ ಅವನನ್ನು ನೃಶಂಸನೆಂದು ಕರೆಯುತ್ತಾರೆ, ಮತ್ತು ಯಾರ ಬಳಿ ಎರಡು ಎತ್ತುಗಳಿರುವುದೋ ಅವನನ್ನು ಗವಾಶಸನ– ಗೋಮಾಂಸ ಭಕ್ಷಿ ಎಂದು ಕರೆಯುತ್ತಾರೆ.

ಎತ್ತುಗಳಿಂದ ಅಧಿಕ ಶ್ರಮಲಾಭ ಪಡೆಯುವುದನ್ನೂ ಸಹ ಪುರಾಣಗಳಲ್ಲಿ ನಿಶೇಧಿಸಲಾಗಿದೆ ; ಎಂಟು ಎತ್ತುಗಳಿದ್ದ ಕಕ್ಷದಲ್ಲಿ, ಎರಡೆರಡು ಪ್ರಹರಗಳಿಗೆ ಒಂದೊಂದು ಜೊತೆಯಂತೆ ನಾಲ್ಕು ಪ್ರಹರಗಳಲ್ಲಿ ಕೆಲಸ ತೆಗೆಯಬಹುದಾಗಿದೆ, ಅಥವಾ ಎಂಟು ಎತ್ತುಗಳಿರುವ ವ್ಯಕ್ತಿಯು ಇಡೀ ದಿನ ಕೃಷಿಕಾರ್ಯದಲ್ಲಿ ತೊಡಗಬಹುದು: ಆರು ಎತ್ತುಗಳುಳ್ಳ ವ್ಯಕ್ತಿಯು ಕೇವಲ ಮೂರು ಪ್ರಹರಗಳು ಮಾತ್ರ ಅವುಗಳಿಂದ ಕೆಲಸ ತೆಗೆಯಬಹುದು ; ನಾಲ್ಕು ಎತ್ತುಗಳುಳ್ಳವನು ಮಧ್ಯಾಹ್ನದ ತನಕ, ಮತ್ತು ಎರಡು ಎತ್ತುಳ್ಳವನು ಬೆಳಿಗ್ಗೆಯೇ ಅವುಗಳಿಂದ ಕೆಲಸ ತೆಗೆಯುವುದನ್ನು ನಿಲ್ಲಿಸಬೇಕು. ಈ ನಿಯಮವು ಅತ್ರಿಸಂಹಿತೆಯಲ್ಲಿ ಉಕ್ತವಾಗಿದೆ. ಪರಾಶರ ಸಂಹಿತೆಯಲ್ಲಿ ಈ ರೀತಿ ಹೇಳಲ್ಪಟ್ಟಿದೆ— ' ಆಯಾಸಗೊಂಡ, ಸುಸ್ತಾದ, ರೋಗಗ್ರಸ್ತ ಪಾಡ ಎತ್ತುಗಳಿಂದ ಕೆಲಸ ತೆಗೆಯುವುದು ಘೋರ ಪಾಪವಾಗಿದೆ.

ಗೋಪಾಲನಾ ವ್ಯವಸ್ಥೆಯ ಮತ್ತು ಗೋಶಾಸ್ತ್ರವಿಹಿತ ವಿವೇಚನೆಯು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿಯೂ ಸಹ ಉಕ್ತವಾಗಿದೆ. ಗೋವುಗಳ ಪಾಲಕನನ್ನು ಗೋಅಧ್ಯಕ್ಷ ಎಂದು ಕರೆಯುತ್ತಾರೆ. ಗೋಪಾಲಕ, ಪಿಡಾರಕ, ದೋಹಕ, ಮಂಥಕ ಮತ್ತು ಲುಬ್ಧಕ, ಈ ಐದು ಗೋರಕ್ಷ ಅಧಿಕಾರಿಗಳನ್ನು ಪ್ರತ್ಯೇಕ ರಾಜ್ಯಗಳಲ್ಲಿದ್ದರೆಂದು ತಿಳಿಯಬಹುದು. ಈ ಅಧಿಕಾರಿಗಳು ರಾಜ್ಯದಿಂದ ಮಾಶಾಸನವನ್ನು ಪಡೆಯುತ್ತಿದ್ದರು. ಹಸುವಿನ ಹಾಲಿನಲ್ಲಿ ಅವರಿಗೆ ಭೋಗ ಯಾ ಹಿಸ್ಸೆ ಇರುತಿರಲಿಲ್ಲ ಕೌಟಿಲ್ಯನ ಕಾಲದಲ್ಲಿ ರಾಜ್ಯದ ಸ್ಥಾನಸ್ಥಾನಗಳಲ್ಲಿಯೂ ಸರಕಾರದಿಂದ ಸ್ಥಾಪಿಸಲ್ಪಟ್ಟ ಗೋಶಾಲೆಗಳಿರುತ್ತಿದ್ದವು. ಗೋಮಾಳದಲ್ಲಿ ಯಾವುದೇ ವ್ಯಕ್ತಿಯು ತನ್ನ ಗೋವುಗಳನ್ನು ಮೇಯಲು ಬಿಡಬಹುದಾಗಿತ್ತು. ಸರ್ಕಾರದ ಗೋಶಾಲೆಗಳ ಖರ್ಚನ್ನು ಗೋಪಾಲಕರುಗಳಿಂದ ತೆರಿಗೆ ರೂಪದಲ್ಲಿ ವಸೂಲ್ಮಾಡಲಾಗುತ್ತಿತ್ತು. ಸರಕಾರದ ಗೋಶಾಲೆಗಳಿಗೆ ಸೇರಿದ ಪಶುಗಳ ಮೇಲೆ ವಿಶೇಷ ಪ್ರಕಾರವಾದ ಮುದ್ರೆಯಿಂದ ಚಿಹ್ನೆ ಅಂಕಿತಗೊಳಿಸುತ್ತಿದ್ದರು ಅವುಗಳ ಸಂತತಿಯ ವಿವರವನ್ನು ಪ್ರತ್ಯೇಕ ಪಾತೆಯಲ್ಲಿ ದಾಖಲ್ಮಾಡುತ್ತಿದ್ದರು ಪಶುಪಾಲಕನ ಉದಾಶೀನದಿಂದಾಗಲೀ, ಆಲಕ್ಷ್ಯತೆಯಿಂದಾಗಲೀ ಯಾವುದಾದರೂ ಹಸುವು ರೋಗಗ್ರಸ್ತವಾದರೆ ಆ ಗೋಪಾಲಕನಿಗೆ ದಂಡನೆಯುಂಟಾಗುತಿತು. ಕಾಡಿನಲ್ಲಿರುತ್ತಿದ್ದ ಪಶುಗಳ ಕತ್ತಿಗೆ ಗಂಟೆಯನ್ನು ಕಟ್ಟುತ್ತಿದ್ದರು ; ಕಾರಣ, ಹಾವುಗಳೇ ಮುಂತಾದ ವಿಷಜಂತುಗಳು ಅದರ ಸಮೀಪಕ್ಕೆ ಬರದಿರಲೆಂದು. (ಮುಂದುವರಿಯುವುದು)

Kannada version of Syt J. Dalmiaji's Article –
" Were Cows slaughtered at King Ranti Deva's Place ? "

" ರಾಜಾ ರಂತೀದೇವ್‌ರವರ ಸ್ಥಳದಲ್ಲಿ ಗೋಹತ್ಯ ಮಾಡಲ್ಪಡುತ್ತಿತ್ತೆ ? "

★

(ಮುಂದುವರಿದುದು)

ಸ್ಮೃತಿಗಳಲ್ಲಿ, ಗೃಹ ಸೂತ್ರಗಳಲ್ಲಿ ಮತ್ತು ಅದಕ್ಕೆ ಸಂಬಂಧಿಸಿದ ಗ್ರಂಥಗಳಲ್ಲಿ ಆಲಂಭನ ಮತ್ತು ಅಲಭತೆ ಪದಗಳು ಮುಟ್ಟುವುದು ಎಂದು ಅರ್ಥಕೊಡುತ್ತವೆ. ಉದಾಹರಣೆಗಾಗಿ —

(1) " ಮೀಮಾಂಸ ದರ್ಶನ " ದ ಮೇಲಿನ ಸುಬೋಧಿನಿ ಟೀಕೆಯಲ್ಲಿ [2 3 17] ಆಲಂಭಃ ಸ್ಪರ್ಶೋ ಭವತಿ ಎಂದು ಹೇಳಿದೆ ; ಅಂದರೆ ಆಲಂಭವು ಸ್ಪರ್ಶಿಸುವುದು (ಮುಟ್ಟುವುದ) ಎಂದಾಗಿದೆ.

(2) ಬ್ರಹ್ಮಚಾರಿಯ ಕರ್ತವ್ಯದಲ್ಲಿ — ವರ್ಜಯೇತ್ ಸ್ತ್ರೀಣಾಂ ಚ ಪ್ರೇಕ್ಷಣಾ ಲಂಭಮ್, ಎಂದಿದೆ ; ಅಂದರೆ, ಬ್ರಹ್ಮಚಾರಿಯು ಸ್ತ್ರೀ ಕಡೆ ನೋಡುವುದನ್ನೂ ಅಥವಾ ಆಕೆಯನ್ನು ಮುಟ್ಟುವದನ್ನೂ ತ್ಯಜಿಸಬೇಕು. (ಮನು 2 179)

(3) ಉಪನಯನ ಮಹೋತ್ಸವದಲ್ಲಿ — ಅಥಾಸ್ಯ [ಬ್ರಹ್ಮಚಾರಿಣಃ] ದಕ್ಷಿಣಾಸಂ ಅಧಿ ಹೃದಯಂ ಆಲಭತೆ, ಎಂದಿದೆ ; ಅಂದರೆ, ಅಧ್ಯಾಪಕನು ಬ್ರಹ್ಮಚಾರಿಯ ಹೃದಯವನ್ನು ಮುಟ್ಟುವನು [ಪಾರಸ್ಕರ – ಗೃಹ್ಯಸೂತ್ರ 2-2-16]

[4] ವಿವಾಹಮಹೋತ್ಸವದಲ್ಲಿ — ವರೋ ವಧ್ವಾ ದಕ್ಷಿಣಾಂಸಂ ಅಧಿ ಹೃದಯಂ ಆಲಭತೆ, ಎಂದಿದೆ ; ಅಂದರೆ, ವರನು ಪಥುವಿನ ಬಲತೋಳು ಮೇಲಿಂದ ಅವಳ ಹೃದಯವನ್ನು ಮುಟ್ಟುತ್ತಾನೆ [ಪಾರಸ್ಕರ - ಗೃಹ್ಯ ಸೂತ್ರ 1-8-8] ಇತ್ಯಾದಿ.

[5] ಭಾಗವತ-ಮಹಾಪುರಾಣವೂ [11-5-13] ಯಜ್ಞ, ಪಶು ಆಲಂಭನದಲ್ಲಿ, ಕೊಲ್ಲುವ ಅರ್ಥ ಕೊಡುವುದಿಲ್ಲವೆಂದು ಸ್ಪಷ್ಟವಾಗಿ ಪ್ರಮಾಣಗೊಳಿಸಿದೆ —

ಯದ್ ಘ್ರಾಣ ಭಕ್ಷ್ಯೋ ವಿಹಿತಃ ಸುರಾಯಸ್ತ್ವಥ ಯಜ್ಞೋದಾಲಭನಂ ನ ಹಿಂಸಾ
[ಶ್ರೀಮದ್ಭಾಗವತ 11-5-13]

[6] ಸ್ಪರ್ಶ [ಅಂದರೆ ಮುಟ್ಟುವುದು] ಪದವು ದಾನಕ್ಕೂ ಉಪಯೋಗಿಸಲ್ಪಡುವುದು. ಕಾಳಿದಾಸ ಮಹಾಕವಿಯು ರಘುವಂಶ 2-49 ರಲ್ಲಿ, ಗಾಃ ಕೋಟಶಃ ಸ್ಪರ್ಶಯಾತ್ ಘಟೋಧ್ವನೀಃ, ಎಂದಿರುವುದರಲ್ಲಿ, ಸ್ಪರ್ಶಯಾತಾ ಅಂದರೆ, ದಾನವೆಂದರ್ಥವು.

ಈಗಿನ ಕಾಲದಲ್ಲೂ ಕೂಡ, ದಾನ ಕೊಡುವವರು ದಾನ ಸ್ವೀಕರಿಸುವವರಿಗೆ ಪದಾರ್ಥಗಳನ್ನು ಮುಟ್ಟುವ ಪದ್ಧತಿಯಿದೆ ದಾನ ಕೊಡುವ ಪದಾರ್ಥಗಳು ಅತಿ ಹೆಚ್ಚಾಗಿದ್ದು, ಶಾರೀರಕವಾಗಿ ಮುಟ್ಟಲು ಸಾಧ್ಯವಾಗದಿದ್ದರೆ, ಅವುಗಳ ಕಡೆ ದೃಷ್ಟಿ ಸಿ ನೋಡಿ, ಕೇವಲ ಕಣ್ಣಿನ ದೃಷ್ಟಿನಿಂದ ಮುಟ್ಟಲಾಗುವುದು.

ಮಹಾಭಾರತದ ಶಾಂತಿ ಪರ್ವ [ರಾಜಧರ್ಮ] ದ 29 ನೇ ಪರಿಚ್ಛೇದದಲ್ಲಿ ಗೋವುಗಳನ್ನು ದಾನಮಾಡಿ ಕೀರ್ತಿಪಡೆದ ರಾಜರುಗಳ ಹೆಸರುಗಳು ನಮೂದಿಸಲಾಗಿದೆ. ಗೀತಾ ಪ್ರೆಸ್ ಮತ್ತು ಚಿತ್ರಶಾಲಾ ಸಂಸ್ಕರಣಗಳ 127 ನೇ ಪದ್ಯ ಮತ್ತು ಫರ್ಡಾರ್ಕರ್ ಸಂಸ್ಕರಣದ 119 ನೇ ಪದ್ಯದಲ್ಲಿಯ ಆಲಂಭಂತ ಶತಂ ಗಾವಃ, ಎಂಬುದರಲ್ಲಿಯ ಆಲಂಭಂತ ಪದದ ಸಂದರ್ಭದಲ್ಲಿ, ಪಡೆಯುವುದು [ಪ್ರಾಪ್ತಿ] ಅಥವಾ ಮುಟ್ಟುವುದು [ಸ್ಪರ್ಶ] ಎಂದು ಮಾತ್ರ ಗೋದಾನ ಸಂದರ್ಭದಲ್ಲಿ ಅರ್ಥವಾಗುವುದು. ಹಾಗೇ ಕಾಳಿದಾಸ ಮಹಾಕವಿಯ ಮೇಘದೂತದ ಪೂರ್ವಮೇಘದಲ್ಲಿ ಸುರಭಿತನಯಾ ಆಲಂಭಜಾಂ ರಂತೀದೇವಸ್ಯ ಕೀರ್ತಿಮ್, ಎಂಬಲ್ಲಿಯ ಆಲಂಭ ಪದವು ಗೋದಾನಕ್ಕೆ ಸಂಬಂಧಿಸುವುದೇ ಹೊರತು ಅವುಗಳನ್ನು ಕೊಲ್ಲುವುದಕ್ಕಲ್ಲ

○✱●✱○

ಶಿಖರದಲ್ಲಿ ಮದುವೆ

ನ್ಯೂಯಾರ್ಕಿನ ಸಾರನಾಕ್ ಸರೋವರದಿಂದ ಬಂದಿರುವ ವಾರ್ತೆ 25 ವರ್ಷ ವಯಸ್ಸಿನ ಡೆವಿಸ್ ಜಾರ್ಜ್ ಮತ್ತು 18ವರ್ಷ ವಯಸ್ಸಿನ ಇರೇ ಹಾಲೆಂಡ್ ನ್ಯೂಯಾರ್ಕ್ ರಾಜ್ಯದಲ್ಲಿ 1600 ಮೀಟರುಗಳ ಅತಿ ಎತ್ತರದ ಶಿಖರವಾದ ಮೌಂಟ್ ಮಾಸಿ ಹತ್ತಿ ಅಲ್ಲಿ ಮದುವೆ ಆದರು ಇವರು ಪರ್ವತಾರೋಹಿಗಳು

Cow – An American View

(continued from last Issue)

Why does the ndian Government, which is supposed to represent the Hindu people, follow the whims of the atheists and demoniac ? Why doesn't it follow instead, the example of the great saint and king, Maharaja Pariksh t. li is related in the Srimad Bhagawata that king Parikshit came the defence of a cow that was mercilessl, beateu by a lowerclass man. Maharaja nearly killed the beater of the cow and chaistied him in this way, " You rogue, do you dare beat the innocent cow just because Lord Krishna and Arjuna are out of sight ? You are beating the innocent and therefore deserve to be killed ; Oh mother cow, as long as I am living as the ruler and subduer of all envious and cruel men, there is no cause for your crying — Any upstart who commits offence by torturing offenceless living beings, even though he be a denizen of heavenly planets, shall be uprooted by me directly ".

(Srimad Bhagavata, first Canto, 17 th Chapter)

As an American, I look to Mother India for spiritual inspiration and guidance. I feel that America is sufficiently irreligious and meterialistic to commit all offences necessary in one world. Why should India join it ? It saddens me to r e a d about the slaughter of religious principl in India and I can only take this as a symptom of the general disintegration of God-consciousness in the world. I fear Lord Krishna's displeasure with India and her Government — Howard M Wheeler

[Reprint from Kalyan Kalpataru – Truth] New York

[A news item published by the "Indian Express '
New Delhi, under the heading " Readers' views '

Cow-Slaughter

(Statesman) M. Singh writes from Haryana

Sir— When cows and bullocks are past their usefulness their owners in U. P willinly part with them free or for a few rupees to avoid having to feed them. Since cow-slaughter is banned in U. P. these animals are often flayed alive for hides hides because after an hours flaying, it cannot be technically proved whether the animal died a natural death or slaughtered. Cannot something be done to end this most cruel practice ?

† Horrible ! This flaying of live cows must be stopped at once. (Truth)

Rani's kindness to Animals

Marathi queen Ahalya Bai's sense of love and kindness stretched even to birds and animals. She kept a small plot of land in every village where the birds and animals lived untroubled and where even useless animals were taken care of

★★★★

Turning the Wheel of Happiness

DALMIA CEMENT (BHARAT) LIMITED

Dalmiapuram P. O., Tiruchirapalli Distt.

(Tamil Nadu)

Manufacturers of

'ROCKFORT' BRAND

DALMIA Portland Cement

ALSO

Mine-Owners & Suppliers of High Grade Iron Ore for Export

H .O : 4 Scindia House, New Delhi - 1.

ವುಡ್‌ಲಾಂಡ್ 22-9-72ರಿಂದ ಆಮೋಘ 3ನೇ ವಾರ

ಹಿಂದಿ ಈಸ್ಟ್‌ಮನ್ ಕಲರ್

ಆ ಂ ಖೊ ಆ ಂ ಖೊ ಮೆ

ಅ ಪೆ ರಾ 22 9 72 ರಿಂದ

ಶ್ರೀ ನವನೀತ್ ಫಿಲಂಸ್‌ರವರ ಆಮೋಘ ತಮಿಳು ಚಿತ್ರ

ಪು ಗು ಂ ದ ವಿ ೀ ಡು

ಛತ್ರಿ, ರೇನ್ ಕೋಟು, ಸೂಟು ಕೇಸು, ಹೋಲ್ಡ್‌ಆಲ್, ಕಿಟ್ ಬಾಗ್‌ಗಳಿಗೆ

ಬ್ಯಾಂಕ್ ರೋಡ್ ಬಾಹುಸಾರ್, ಮೈಸೂರು.

Edited Printedand Published by Dharmapracharanirata M S Krishna Rao (Propretor) at the Satvavadi Press Chamarajapuram Mysore

— ಆಗಸ್ಟ್ ಹದಿನೈದು —

★

ಶತಶತಮಾನದ ಸಮರದ ಫಲಶ್ರುತಿ
ಸಾಂದ ದಿನವಿದು ಹದಿನೈದು.
ಸ್ವತಂತ್ರ ಧರ್ಮದ ವೀಣೆಗೆಯಿನಿಶೃತಿ
ತರಂಗ ಮಾಲೆಯ ಹಾಕಿಹುದು.

ಸ್ವತಂತ್ರ ಯೋಧರ ಕನಸಿನ ಮಾಮೂಸ
ಹೆಣ್ಣನು ಹಂಚಿಹ ದಿನವಿಂದು
ಹುತಾತ್ಮರೆಲ್ಲರ ಸ್ವಾತ್ಮತೆ ತೃಪ್ತಿಯ
ನೀಡಿದ ಪಾವನ ತಿಥಿಯಿಂದು.

ದಿಗಂತ ರವಣಿಯ ಸಾನ್ನಿಧ್ಯದಲಿ
ಭಾರತ ಜನಧ್ವಜ ಬರೆಬರೆದು.
ಜಗತಿಗೆ ಸ್ನೇಹ ಸಂದೇಶವನು
ಕಳಿಸಿಹ ದಿನವಿದು ಹದಿನೈದು.

ವೀರರ ಕರ್ಮದ ಕಥೆಯನು ಹೇಳಿಸಿ
ಮೈಯಲಿ ನವಿರನು ತರಿಸುವುದು
ಮಾರನೆ ದಿನನೇ ಮರೆಯುವರೆಂಬುದ
ನೆನೆಯುತೆ ವಿಷಣ್ಣವಾಗುವದು.

ಉಜ್ವಲ ಸಂಸ್ಕೃತಿ ಪುನರ್ಮೈದಾಳಲಿ
ಶಾಂತಿಯ ಹೂಗಳು ವಿಕಸಿಸಲಿ.
ಗೋಕುಲ ಹಿಂಸೆಯು ಬೇಗನೆ ನಿಲ್ಲಲಿ
ಈ ದಿನ ಪ್ರಾರ್ಥನೆ ದೇವನಲಿ.

— ವಜ್ರಳ್ಳಿ ಗಣಪತಿಶರ್ಮಾ

★

ಆಂಚೇಚೀಟಿ ಪ್ರದರ್ಶನ

ನವದೆಹಲಿ— ಮುಂದಿನ ವರ್ಷ ನವಂಬರಿನಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಆಂಚೇಚೀಟಿ ಪ್ರದರ್ಶನದಲ್ಲಿ 80 ರಿಂದ 130 ದೇಶಗಳು ಭಾಗವಹಿಸಲಿವೆಯೆಂದು ಸಂಪರ್ಕ ಮಂತ್ರಿ ಶ್ರೀ ಬಹುಗುಣರವರು ಪತ್ರಿಕೆಯವರಿಗೆ ತಿಳಿಸಿದರು.

★



ಗೋವಧೆ ನಿಶೇಧವಾಗಲಿ